# ವಾರ್ಡ್‌ಮಟ್ಟದ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:05-09-2015ರ ನಡವಳಿಗಳು

## ವಿಷಯದ ಸಂಖ್ಯೆ : 186 / 2015-16

ವಿಷಯ: **2015-16ನೇ ಸಾಲಿನಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬೀದಿ ದೀಪಗಳ ವಾರ್ಷಿಕ ನಿರ್ವಹಣೆಗೆ ಕೈಗೊಳ್ಳಲು ಅನುಮೋದನೆಗಾಗಿ ಸಲ್ಲಿಸಲಾದ ಟಿಪ್ಪಣಿ.**

**ಪ್ರಸ್ತಾವನೆ:**

ಟಿಪ್ಪಣಿಯಲ್ಲಿ ವಿವರಿಸಿರುವಂತೆ, 2015-16ನೇ ಸಾಲಿನಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿನ ಬೀದಿ ದೀಪಗಳ ವಾರ್ಷಿಕ ನಿರ್ವಹಣೆ ಕೈಗೊಳ್ಳುವ ಸಲುವಾಗಿ ಕಾಮಗಾರಿ ಸಂಖ್ಯೆಗಳನ್ನು ನೀಡುವಂತೆ ಕೋರಿ ಪ್ರಧಾನ ಅಭಿಯಂತರರು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

2015-16ನೇ ಸಾಲಿನ ಆಯವ್ಯಯ ಲೆಕ್ಕ ಶೀರ್ಷಿಕೆ ಪಿ.300 ಪುಟ ಸಂಖ್ಯೆ 134 ರಲ್ಲಿ ರೂ.55.00 ಕೋಟಿಗಳನ್ನು ಮೀಸಲಿರಿಸಿದೆ. ಇದುವರೆವಿಗೆ ಸದರಿ ಮೊತ್ತಕ್ಕೆ ಕಾಮಗಾರಿ ಸಂಖ್ಯೆಗಳನ್ನು ನೀಡಿರುವುದಿಲ್ಲ. ವಾರ್ಡ್‌ವಾರು ಮತ್ತು ವಲಯವಾರು ಪ್ಯಾಕೇಜ್ ಮಾಡಿ ಅನುದಾನವನ್ನು ಹಂಚಿಕೆಯಾಗಿರುವ ವಿವರಗಳನ್ನು ಸಲ್ಲಿಸಲಾಗಿದ್ದು, ವಲಯವಾರು ಹಂಚಿಕೆ ಮಾಡಲಾದ ಒಟ್ಟು ಅನುದಾನದ ಮೊತ್ತ ರೂ.53,07,27000-00 ಗಳಾಗಿದ್ದು, ವಿವರಗಳು ಕೆಳಕಂಡಂತಿರುತ್ತದೆ.

| ಕ್ರಸ. | ವಲಯ | ಅಂದಾಜು ಮೊತ್ತ ರೂ.ಲಕ್ಷಗಳಲ್ಲಿ |
|---|---|---|
| 1 | ಪೂರ್ವ | 1054.19 |
| 2 | ಪಶ್ಚಿಮ | 919.65 |
| 3 | ದಕ್ಷಿಣ | 1048.14 |
| 4 | ಆರ್.ಆರ್.ನಗರ | 543.63 |
| 5 | ಮಹದೇವಪುರ | 544.18 |
| 6 | ಯಲಹಂಕ | 425.23 |
| 7 | ದಾಸರಹಳ್ಳಿ | 228.19 |
| 8 | ಬೊಮ್ಮನಹಳ್ಳಿ | 544.06 |
| | **ಒಟ್ಟು ರೂ.** | **5307.27** |

ಮುಂದುವರೆದು, ವಿದ್ಯುತ್ ವಿಭಾಗಕ್ಕೆ ಸಂಬಂಧಿಸಿದಂತೆ, ವಾರ್ಡ್‌ವಾರು ಮತ್ತು ವಲಯವಾರು ಹಂಚಿಕೆ ಮಾಡಲಾದ ಅನುದಾನದ ಮೊತ್ತಕ್ಕೆ ಎದುರಾಗಿ, ವಲಯ ಸಹಾಯಕ ನಿಯಂತ್ರಕರು (ಹಣಕಾಸು) ರವರು ಕಾಮಗಾರಿ ಸಂಖ್ಯೆಗಳನ್ನು ನೀಡಬೇಕಾಗಿರುತ್ತದೆ. ಮುಖ್ಯ ಆರ್ಥಿಕ ಅಧಿಕಾರಿಗಳ ಕಛೇರಿಯಿಂದ ವಾರ್ಡ್‌ವಾರು ಹಂಚಿಕೆ ಮಾಡಲಾದ ಅನುದಾನದ ಮೊತ್ತವನ್ನು, ಜಾಬ್ ನಂಬರ್ ತಂತ್ರಾಂಶದಲ್ಲಿ ಹಂಚಿಕೆ ಮಾಡಬೇಕಾಗಿರುತ್ತದೆ.

ಆದ್ದರಿಂದ, ಮೇಲ್ಕಂಡಂತೆ 2015-16ನೇ ಸಾಲಿನಲ್ಲಿ ಪ್ರಧಾನ ಅಭಿಯಂತರರು ಪಾಲಿಕೆ ವ್ಯಾಪ್ತಿಯಲ್ಲಿ ಬೀದಿ ದೀಪಗಳ ನಿರ್ವಹಣೆಗೆ ವಲಯವಾರು ಮತ್ತು ವಾರ್ಡ್‌ವಾರು ಪ್ಯಾಕೇಜ್ ಮಾಡಿ ಹಂಚಿಕೆ ಮಾಡಿರುವ ಒಟ್ಟು ಮೊತ್ತ ರೂ.53,07,27,000-00 ಗಳಿಗೆ ವಲಯ ಸಹಾಯಕ ನಿಯಂತ್ರಕರು (ಹಣಕಾಸು) ರವರು ಜಾಬ್ ನಂಬರು ನೀಡುವ ಸಲುವಾಗಿ, ಜಾಬ್ ನಂಬರ್ ತಂತ್ರಾಂಶದಲ್ಲಿ ಹಂಚಿಕೆ ಮಾಡಿ ಅಳವಡಿಸುವ ಬಗ್ಗೆ ಅನುಮೋದನೆ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ: 04-09-2015ರ ಟಿಪ್ಪಣಿ.

**ತೀರ್ಮಾನ: "ಅನುಮೋದಿಸಿದೆ".**

(ಟಿ.ಎಂ.ವಿಜಯಭಾಸ್ಕರ್)
ಆಡಳಿತಗಾರರು

## ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:05-09-2015ರ ನಡವಳಿಗಳು

### ವಿಷಯದ ಸಂಖ್ಯೆ :188 / 2015-16

ವಿಷಯ: **Improvements, Strengthening and Asphalting of Twenty (20) Arterial and Sub-Arterial roads in Mahadevapura Zone-Package-No. Mp 2014-15(2) ಪ್ಯಾಕೇಜ್ ಕಾಮಗಾರಿಯ Work Slip, ಅನುಮೋದನೆ ನೀಡುವ ಬಗ್ಗೆ.**

**ಪ್ರಸ್ತಾವನೆ:**

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ದಿನಾಂಕ:13.08.2015 ರಂದು ರಸ್ತೆಯ ಪರಿವೀಕ್ಷಣಾ ಸಮಯದಲ್ಲಿ ಸ್ಥಳದಲ್ಲಿ ಹಾಜರಿದ್ದ ಮುಖ್ಯ ಅಭಿಯಂತರರು (ರಸ್ತೆ ಮೂಲಭೂತ ಸೌಕರ್ಯ), ಮೇಲ್ಕಂಡ ಪ್ಯಾಕೇಜ್ ಕಾಮಗಾರಿಯಲ್ಲಿ ಒಟ್ಟು 20 ರಸ್ತೆಗಳ ಅಭಿವೃದ್ಧಿ ಕಾಮಗಾರಿಗಳಿಗೆ ರೂ.49.00 ಕೋಟಿಗಳ ಅಂದಾಜಿಗೆ ಘನ ಸರ್ಕಾರದಿಂದ ಅನುಮೋದನೆಗೊಂಡ್ಡಿದ್ದು, ಈ ಕಾಮಗಾರಿಯನ್ನು ಗುತ್ತಿಗೆದಾರಾದ M/s N.S. Nayak & sons ರವರಿಗೆ ಗುತ್ತಿಗೆ ಮೊತ್ತ ರೂ. 43,93,36,342/- ಗಳಿಗೆ (ಶೇ.9.00ಹೆಚ್ಚು) ಕಾರ್ಯಾದೇಶವನ್ನು ದಿನಾಂಕ:15-07-2015 ರಂದು ನೀಡಲಾಗಿದ್ದು, ಸದರಿ ಯೋಜನೆಯು ಪ್ರಾರಂಭಿಸಲಾಗಿರುತ್ತದೆ. ಈ ಪ್ಯಾಕೇಜ್‌ನಲ್ಲಿ ಪ್ರಸ್ತಾಪಿಸಿರುವ ಐ.ಟಿ.ಪಿ.ಎಲ್ ರಸ್ತೆಯು ಕೆ.ಆರ್.ಪುರಂ ಮೇಲ್ಸೇತುವೆಯಿಂದ ಸರಪಳಿ: 0.00 ಯಿಂದ 8610ಮೀ ಮತ್ತು ಹೋಪ್ ಫಾರಂ ನಿಂದ ಮಯೂರ ಬೇಕರಿಯ (ಚನ್ನಸಂದ್ರ) ವರೆಗಿನ ನಗರೋತ್ಥಾನ ಅನದಾನದಡಿಯಲ್ಲಿ ಮಂಜೂರಾಗಿರುವ ಅಂದಾಜು ಪಟ್ಟಿಯಲ್ಲಿ ಆಯ್ದ ಭಾಗಗಳಲ್ಲಿ Profile correctionಗೆ DBM ಪದರವನ್ನು ಮತ್ತು ಇದರ ಮೇಲ್ಭಾಗಕ್ಕೆ BC 40mm ಪದರವನ್ನು ಹಾಕಲು ಅಂದಾಜು ಪಟ್ಟಿಯಲ್ಲಿ ಅನುವು ಮಾಡಲಾಗಿರುತ್ತದೆ.

ಈ ರಸ್ತೆಯು ಈ ಹಿಂದೆ ಘನ ಸರ್ಕಾರದಿಂದ ಸಿಗ್ನಲ್ ಫ್ರೀ ಕಾರಿಡಾರ್ ಯೋಜನೆಯನ್ನು ಸಲ್ಲಿಸುವ ಸಮಯದಲ್ಲಿ ರಸ್ತೆಯ ಕೆಳ ಸೇತುವೆ ಹಾಗೂ ರಸ್ತೆಯನ್ನು ಸುಸ್ಥಿತಿಯಲ್ಲಿಡಲು BC 40mm ಪದರವನ್ನು ಅಂದಾಜಿನಲ್ಲಿ ಅನುವು ಮಾಡಲಾಗಿದ್ದು, ಸರ್ಕಾರದಲ್ಲಿ ಅನುಮೋದನೆಗೊಂಡಿರುತ್ತದೆ. ಈ ಹಂತದಲ್ಲಿ ಭೂಸ್ವಾಧೀನಪಡಿಸಿಕೊಂಡು ಕೆಳ ಸೇತುವೆ ನಿರ್ಮಾಣ ಮತ್ತು ರಸ್ತೆ ಅಭಿವೃದ್ಧಿಗೆ ಹೆಚ್ಚಿನ ಕಾಲಾವಕಾಶ ಬೇಕಾಗಿರುತ್ತದೆ.

ಮುಂದುವರೆದಂತೆ, ಪ್ರಸ್ತಾಪಿಸಿರುವ ರಸ್ತೆಯು ಹೆಚ್ಚಿನ ವಾಹನ ಸಾಂದ್ರತೆಯಿಂದ ಕೂಡಿದ್ದು, ರಸ್ತೆಯು ಉಪಯುಕ್ತ ಸೌಲಭ್ಯಗಳನ್ನು ಅಳವಡಿಸುವ ಸಂಬಂಧ ರಸ್ತೆಯನ್ನು ಅಗೆದು ಸಂಪೂರ್ಣವಾಗಿ ಹಾಳಾಗಿದ್ದು structurally inadequate ಆಗಿರುವುದರಿಂದ ಕೇವಲ wearing course ಅಂದರೆ BC ಪದರವನ್ನು ಹಾಕುವುದರಿಂದ ರಸ್ತೆಯು ಧೀರ್ಘಕಾಲ ಬಾಳಿಕೆ ಬಾರದೆ ಹಾಳಾಗುವ ಸಂಭವವಿರುತ್ತದೆ ಎಂದು ತಿಳಿಸಿರುತ್ತಾರೆ.

ಈ ಹಿನ್ನೆಲೆಯಲ್ಲಿ ಸದರಿ ರಸ್ತೆಯಲ್ಲಿ ಪ್ರತಿ ನಿತ್ಯ ಸಾವಿರಾರು ವಾಹನಗಳು ಸಂಚರಿಸುವ ಪ್ರಮುಖ ರಸ್ತೆಯಾಗಿದ್ದು ಈ ರಸ್ತೆಯ ದುರಸ್ತಿ ಕಾರ್ಯವನ್ನು ತ್ವರಿತವಾಗಿ ಕೈಗೊಳ್ಳಬೇಕಾಗಿರುವುದರಿಂದ ಹಾಗೂ ಈ ರಸ್ತೆಯು ಈಗಾಗಲೇ ಸಿಗ್ನಲ್ ಫ್ರೀ ಕಾರಿಡಾರ್ ಯೋಜನೆಯಡಿ ಕೈಗೆತ್ತಿಕೊಳ್ಳಲು ನಿರ್ಧರಿಸಿರುವುದಾಗಿ ತಿಳಿದುಬಂದಿದ್ದು, ಈ ಸಿಗ್ನಲ್ ಫ್ರೀ ಕಾರಿಡಾರ್ ಕಾಮಗಾರಿಯು ಇನ್ನೂ ವಿಳಂಭವಾಗುವ ಸಾಧ್ಯತೆ ಇರುವುದರಿಂದ ಈಗಾಗಲೇ ನಗರೋತ್ಥಾನ ಅನುದಾನದ ಅಡಿ ಮಂಜೂರಾಗಿರುವ ಡಾಂಬರೀಕರಣ

..................2

ಕಾಮಗಾರಿಯನ್ನು ಸೂಕ್ತ ಬದಲಾವಣೆ ಮಾಡಿಕೊಂಡು ಅಂದರೆ BC 40mm ಪದರದ ಬದಲು DBM 50mm ಪದರವನ್ನು ಹಾಕಿ ಸಾರ್ವಜನಿಕರ ವಾಹನ ಸಂಚಾರಕ್ಕೆ ಅನುವು ಮಾಡುವುದು. ಸಿಗ್ನಲ್ ಫ್ರೀ ಕಾರಿಡಾರ್ ಕಾಮಗಾರಿ ಅಡಿಯಲ್ಲಿ ಡಾಂಬರೀಕರಣ ಮಾಡುವ ಸಮಯದಲ್ಲಿ ಈ ಭಾಗಕ್ಕೆ BC 40mm ಪದರವನ್ನು ಮಾತ್ರ ಅಳವಡಿಸಲು ಕ್ರಮ ಕೈಗೊಳ್ಳುವ ಬಗ್ಗೆ ಪಾಲಿಕೆಯ ತಾಂತ್ರಿಕ ಸಲಹಾ ಸಮಿತಿ (TAC) ಮುಂದೆ ಪ್ರಸ್ತಾವನೆ ಮಂಡಿಸಿ ಅಭಿಪ್ರಾಯ ಪಡೆದು ಸೂಕ್ತ ಕ್ರಮವಹಿಸಲು ಸೂಚಿಸಲಾಗಿತ್ತು.

ಮುಂದುವರೆದು, ದಿನಾಂಕ: 27-08-2015ರಂದು ನಡೆದ ತಾಂತ್ರಿಕ ಸಲಹಾ ಸಮಿತಿ (TAC) ಮುಂದೆ ಸದರಿ ಪ್ರಸ್ತಾವನೆಯನ್ನು ಮಂಡಿಸಿ, ಸಭೆಯಲ್ಲಿ ನಗರೋತ್ಥಾನ ಅನುದಾನದ ಅಡಿ ಮಂಜೂರಾಗಿರುವ ಐ.ಟಿ.ಪಿ.ಎಲ್ ರಸ್ತೆ ಡಾಂಬರೀಕರಣ ಕಾಮಗಾರಿಯನ್ನು ಸೂಕ್ತ ಬದಲಾವಣೆ ಮಾಡಿಕೊಂಡು ಅಂದರೆ BC 40mm ಪದರದ ಬದಲು DBM 50mm ಪದರವನ್ನು ಹಾಕಿ ಸಾರ್ವಜನಿಕರ ವಾಹನ ಸಂಚಾರಕ್ಕೆ ತುರ್ತಾಗಿ ಅನುವು ಮಾಡುವುದು ಹಾಗೂ ಸಿಗ್ನಲ್ ಫ್ರೀ ಕಾರಿಡಾರ್ ಕಾಮಗಾರಿ ಅಡಿಯಲ್ಲಿ ಡಾಂಬರೀಕರಣ ಮಾಡುವ ಸಮಯದಲ್ಲಿ ಈ ಭಾಗಕ್ಕೆ BC 40mm ಪದರವನ್ನು ಮಾತ್ರ ಅಳವಡಿಸಲು ನಿರ್ಣಯಿಸಿ ಕ್ರಮ ವಹಿಸಲು ಸೂಚಿಸಲಾಗಿರುತ್ತದೆ.

ಮೂಲ ಅಂದಾಜು ಪಟ್ಟಿಯಲ್ಲಿ ಸದರಿ ರಸ್ತೆಗೆ BC ಪದರವನ್ನು ಮತ್ತು profile corrective courseನ್ನು ಅಳವಡಿಸಲು ರೂ.6.00 ಕೋಟಿಗಳಷ್ಟು ಅನುವು ಮಾಡಿದ್ದು ಮೂಲ ಅಂದಾಜು ಪಟ್ಟಿ ಅಂಶಗಳ ಬದಲಿಗೆ ಸದರಿ ರಸ್ತೆಗೆ ಪೂರ್ಣವಾಗಿ ಆಯ್ದ ಭಾಗಗಳಲ್ಲಿ DBM ಪದರವನ್ನು ಅಳವಡಿಸಲು 7.69 ಕೋಟಿಗಳು ಬೇಕಾಗಿದ್ದು ಇದರಿಂದ ಹೆಚ್ಚುವರಿಯಾಗುವ 1.69 ಕೋಟಿಗಳ ಮೊತ್ತವನ್ನು ಒಟ್ಟಾರೆ ಪ್ಯಾಕೇಜ್‌ನಲ್ಲಿ ನಮೂದಿಸಿರುವ ಕಡಿಮೆ ಟೆಂಡರ್ ದರಗಳಲ್ಲಿ ಉಳಿತಾಯವಾಗುವ ಒಟ್ಟಾರೆ ಮೊತ್ತ ರೂ.5.07 ಕೋಟಿಗಳಲ್ಲಿ ಸದರಿ ಮೊತ್ತವನ್ನು ಭರಿಸಬಹುದಾಗಿದ್ದು, ಇದರಿಂದ ಯಾವುದೇ ಹೆಚ್ಚುವರಿ ಆರ್ಥಿಕ ಹೊರೆಯಾಗುವುದಿಲ್ಲ ಹಾಗೂ ಮಾನ್ಯ ಆಡಳಿತಾಧಿಕಾರಿಗಳ ಮತ್ತು ತಾಂತ್ರಿಕ ಸಲಹಾ ಸಮಿತಿಯ (TAC) ಶಿಫಾರಸ್ಸಿನಂತೆ ಸದರಿ ಪ್ರಸ್ತಾವನೆಗೆ ಅನುಮೋದನೆ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರ ದಿನಾಂಕ: 04-09-2015ರ ಟಿಪ್ಪಣಿ.

**ತೀರ್ಮಾನ: "ಈಗಿರುವ ರಸ್ತೆಯ ಪರಿಸ್ಥಿತಿಯ ಪೂರ್ಣ ಉದ್ದವನ್ನು ವೀಡಿಯೋ ಚಿತ್ರೀಕರಣ ಮಾಡುವುದು. TAC ತೀರ್ಮಾನಗಳನ್ನು ಪಾಲಿಸುವ ಷರತ್ತಿನೊಂದಿಗೆ ಅನುಮೋದಿಸಿದೆ".**

(ಟಿ.ಎಂ.ವಿಜಯಭಾಸ್ಕರ್)
ಆಡಳಿತಗಾರರು